ಆಶಾ ಜಗದೀಶ್

# ಹಕ್ಕಿಪುಚ್ಚವೆನ್ನುವ ಬೆಚ್ಚಾನೆ ತಾವು

ಪ್ರಾರ್ಥನೆಗೆ ನಿಂತಿದ್ದ ಮಕ್ಕಳು ಸುಶ್ರಾವ್ಯ ವಂದನೆಯಲ್ಲಿ ತೊಡಗಿದ್ದರು. ಅದು ಅದೆಲ್ಲಿಂದ ಹಾರಿಬಂತೋ ಗೊತ್ತಿಲ್ಲ... ತೇಲುತ್ತಾ ಇಳಿಯುತ್ತಾ ಹಾರುತ್ತಾ ಮೇಲೇರುತ್ತಾ ಪದ್ಮಾವತಿಯ ಕೈ ಮೇಲೆ ಬಂದು ಕೂತಿತು. ಆ ಐದನೇ ತರಗತಿಯ ಮಗು ಅದೆಷ್ಟು ಪುಳಕಗೊಂಡಿತು ಎಂದರೆ, ತಾನು ಎಲ್ಲಿರುವೆ ಎಂಬುದನ್ನು ಮರೆತು ಪ್ರಫುಲ್ಲ ನಗುವಿನೊಂದಿಗೆ ಅದನ್ನು ಹಿಡಿದು, ತನ್ನ ಮೃದು ಕೈಗಳಲ್ಲಿ ಬಚ್ಚಿಟ್ಟುಕೊಂಡಿತು. ಇದೆಲ್ಲವೂ ಇತರರ ಕಣ್ಣಳತೆಗೆ ನಿಲುಕದೆ ನಿಮಿಷ ಮಾತ್ರದಲ್ಲಿ ನಡೆದು ಹೋಗಿತ್ತು. ಎಲ್ಲಕ್ಕೂ ಸಾಕ್ಷಿಯಾಗಿ ಕಣ್ತುಂಬಿಕೊಳ್ಳುತ್ತಾ ನಿಂತಿದ್ದ ನನಗೆ ಅವಳೊಂದು ಪುಟ್ಟ ಕಿನ್ನರಿಯಾದಂತೆ, ಅವಳ ಬೆಚ್ಚನೆ ಮುಷ್ಟಿಯೊಳಗಿನ ಹಕ್ಕಿಪುಚ್ಚ ಬೆಳೆದು ದೊಡ್ಡ ರೆಕ್ಕೆಗಳಾಗಿ ಅವಳ ಬೆನ್ನಿಗಂಟಿದಂತೆ, ಇನ್ನೇನು ಅವಳು ಹಾರುತ್ತಾಳೆ ಮೇಲೆ ಮೇಲೆ ಮೇಲೆ... 'ರಾಷ್ಟ್ರಗೀತ್ ಸಲಾಮಿಯಾಂ ದೋ...' ಎಂದ ಸುದೀಪ. ಅವ ಅಷ್ಟು ಜೋರಾಗಿ ಕೂಗದೇ ಹೋಗಿದ್ದರೆ ಅಲ್ಲೇ ಕನಸಿನಲ್ಲಿ ತೇಲುತ್ತ ನಾನೂ ಹಾರಿ ಹೋಗಿರುತ್ತಿದ್ದೆ. ಎಚ್ಚರಗೊಂಡಿದ್ದೆ... ಹಕ್ಕಿಪುಚ್ಚದ ಮೃದು ನವಿರು ರೇಷಿಮೆ ಸ್ಪರ್ಶ ಸ್ಮೃತಿಯನ್ನು ತಾಕುತ್ತಾ... ಆ ದಿನವೆಲ್ಲಾ ನಾನು ಹಕ್ಕಿಪುಚ್ಚದೊಳಗೇ ತಂಗಿ ಹೋದೆ. ಹಕ್ಕಿಪುಚ್ಚದ ಬೆಚ್ಚಗಿನ ಅನುಭವಗಳು ಸುರುಳಿ ಬಿಚ್ಚಿಕೊಂಡು ಒಪ್ಪವಾಗಿ ಹೊರಬರತೊಡಗಿದವು.

ಬಾಲ್ಯದ ಆ ದಿನಗಳಲ್ಲಿ ನಾವೂ ಸಹ ಇಂಥವೇ ಹಲವಾರು ಅನುಭವಗಳಿಗೆ ಬೇಕುಬೇಕಾಗೇ ಈಡಾಗುತ್ತಿದ್ದೆವು. ನಿಜಕ್ಕೂ ಪ್ರತಿಯೊಂದರಲ್ಲೂ ಎಂಥದೋ ರೋಮಾಂಚನವನ್ನು ಹುಡುಕಿ ಕಂಡು ಅನುಭವಿಸಲು ಹಂಬಲಿಸುತ್ತಿದ್ದ ದಿನಗಳವು. ದೊಡ್ಡವರೆನಿಸಿಕೊಂಡವರಿಗೆ ಕ್ಷುಲ್ಲಕವೆನಿಸುವ ಅವೆಷ್ಟೋ ವಿಷಯಗಳು, ನಮ್ಮೊಳಗೆ ಪುಳಕ ಹುಟ್ಟಿಸುತ್ತಿದ್ದ ಕಾಲ. ಪ್ರತಿಯೊಬ್ಬರಿಗೂ ತಮ್ಮದೇ ಎನ್ನುವ ಪ್ರತ್ಯೇಕ ಬಾಲ್ಯ ಇದ್ದೇ ಇರುತ್ತದೆ. ಮತ್ತದು ವಿಭಿನ್ನವೂ ಆಗಿರುತ್ತದೆ ಎನ್ನುವುದೂ ಸೋಜಿಗವೇ. 'ಇದು ಬೇಡ ನಂಗೆ...' ಅಂತ ಹಾರಿಸಿಕೊಂಡು ಮುಂದಿನ ಹಂತಕ್ಕೆ ಹಾರುವ ಆಯ್ಕೆ ಯಾರಿಗೂ ಇರುವುದಿಲ್ಲ. ಯಾವುದಾದರೂ ಅಹಿತಕರ ಅನುಭವಗಳ ಕಾರಣದಿಂದಾಗಿ ಕೆಟ್ಟು ಹೋದ ಬಾಲ್ಯಗಳಿರಬಹುದೇನೋ... ಆದರೆ ಪ್ರತಿಯೊಬ್ಬರೂ ತಮ್ಮ ತಮ್ಮ ಬಾಲ್ಯವನ್ನು ಆಪ್ಯಾಯಮಾನವಾಗಿ ಪ್ರೀತಿಸುವುದನ್ನು ಕಾಣುತ್ತಿರುತ್ತೇವೆ. ಬಾಲ್ಯವೆನ್ನುವುದು ಅದೇ ತಾನೇ ಹುಟ್ಟಿನ ನಂತರದ ಮೊದಲ ನಡಿಗೆಯಾಗಿರುವುದರಿಂದ, ಜಗತ್ತನ್ನು ಅದೇ ಮೊದಲಾಗಿ ತಿಳಿಯುತ್ತಾ ನೋಡುತ್ತಾ ತಡವುತ್ತಾ ಸಾಗುವ ಕಾರಣಕ್ಕಾಗಿಯೂ